ಕರ್ನಾಟಕ ಸರ್ಕಾರ
ರಾಮನಗರ ಜಿಲ್ಲಾ ಪಂಚಾಯತ್
ಪಂಚಾಯತ್ ಭವನ, ಬಿ.ಎಂ.ರಸ್ತೆ, ರಾಮನಗರ.

ಸಂಖ್ಯೆ: ರಾಜಿಪಂ/ರಾಗ್ರಾಉಖಾಯೋ/ಸಿಆರ್/49/2015-16

ದಿನಾಂಕ: 04.06.2020.

## ಪ್ರಕಟಣೆ

**ವಿಷಯ:-** ಮಹಾತ್ಮಗಾಂಧಿ ನರೇಗಾ ಯೋಜನೆ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಇತರೆ ಯೋಜನೆಗಳಿಗಾಗಿ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಗುಣ ನಿಯಂತ್ರಣ ಮಾನಿಟರ್‌ಗಳಿಗೆ ಪಟ್ಟಿಯಲ್ಲಿ ಸೇರಿಸಲು ಅರ್ಜಿ ಆಹ್ವಾನ.

**ಉಲ್ಲೇಖ:-** ಮಾನ್ಯ ಆಯುಕ್ತರು, ಗ್ರಾಮೀಣಾಭಿವೃದ್ಧಿ ಗಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ರವರ ಪತ್ರ ಸಂಖ್ಯೆ: ಗ್ರಾಅಪ/366/ಉಖಾಯೋ /2017 ದಿ: 07.03.2020.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದನ್ವಯ ಮಹಾತ್ಮಗಾಂಧಿ ನರೇಗಾ ಯೋಜನೆಯನ್ನು ಮತ್ತು ಇತರೆ ಗ್ರಾಮೀಣಾಭಿವೃದ್ಧಿ ಯೋಜನೆಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಅನುಷ್ಠಾನ ಮಾಡುತ್ತಿದೆ. ಮಹಾತ್ಮಗಾಂಧಿ ನರೇಗಾ ಯೋಜನೆಯು ಕೇಂದ್ರ ಸರ್ಕಾರದ ಒಂದು ಪ್ರಾಯೋಜಿತ ಕಾರ್ಯಕ್ರಮವಾಗಿದ್ದು, ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ಒಂದು ಬೃಹತ್ ಯೋಜನೆಯಾಗಿದ್ದು, ಈ ಯೋಜನೆಯಿಂದ ದೀರ್ಘಕಾಲ ಬಾಳಿಕೆ ಬರುವ ಆಸ್ತಿಗಳನ್ನು ಸೃಜಿಸಿ ಗ್ರಾಮೀಣ ಜನರ ಜೀವನ ಆಧಾರಕ್ಕೆ ಭದ್ರತೆಯನ್ನು ಒದಗಿಸಿ ಬಲಪಡಿಸಲಾಗುತ್ತಿದೆ. ಆದರೆ, ಕಾಮಗಾರಿಗಳ ಅನುಷ್ಠಾನದಲ್ಲಿ ಆಸ್ತಿ ಸೃಜನೆಯಲ್ಲಿ ಗುಣ ಮಟ್ಟದ ಬಗ್ಗೆ ಸಾಕಷ್ಟು ನ್ಯೂನತೆಗಳು ಕಂಡು ಬರುತ್ತಿವೆ ಹಾಗೂ ಸೃಜನೆಯಾದ ಆಸ್ತಿಗಳು ದೀರ್ಘಕಾಲಿಕ ಆಸ್ತಿಯಾಗಿ ಉಳಿಯುತ್ತಿಲ್ಲ. ಈ ಕಾರಣಗಳಿಂದ ಸಾರ್ವಜನಿಕರ ದೂರು/ಓಂಬುಡ್ಸ್‌ಮನ್‌ನ ಕೋರಿಕೆಯನ್ವಯ ಸ್ಥಳ ಪರಿಶೀಲನೆ ಮಾಡಿ ಗುಣಮಟ್ಟದ ಬಗ್ಗೆ ವರದಿ ನೀಡಲು ಈಗಾಗಲೇ ರಾಜ್ಯ/ಜಿಲ್ಲಾ ಗುಣಮಟ್ಟ 27 ಮಾನಿಟರ್‌ಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಆದರೆ ಉಲ್ಲೇಖ (1) ರನ್ವಯ ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಪ್ರಧಾನ ಸುತ್ತೋಲೆಯ 7.1.2 ರ ಅಧ್ಯಾಯದಲ್ಲಿ ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ DQM ಮತ್ತು SQM ಗಳನ್ನು ನೇಮಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ.

ಈ ಬಗ್ಗೆ ಆಯುಕ್ತರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ದಿನಾಂಕ: 16.01.2020 ರಂದು ಪತ್ರಿಕೆಯಲ್ಲಿ ಪ್ರಕಟಣೆ ಹೊರಡಿಸಲಾಗಿದೆ. ಸದರಿ ಪ್ರಕಟಣೆಗೆ ಸಿವಿಲ್ 2 ಮತ್ತು ಅರಣ್ಯ-2 ಜಿಲ್ಲಾ ಗುಣ ನಿಯಂತ್ರಣ ಮಾನಿಟರ್‌ಗಳು ತಾತ್ಕಲಿಕವಾಗಿ ಆಯ್ಕೆಯಾಗಿದ್ದು, ಆಯ್ಕೆಗೆ ಬಾಕಿ ಇರುವ ಜಿಲ್ಲಾ ಗುಣ ನಿಯಂತ್ರಣ ಮಾನಿಟರ್‌ಗಳ ಸಂಖ್ಯೆ ಈ ಕೆಳಗಿನಂತಿದೆ.

| ಜಿಲ್ಲಾವಾರು | ನಿಗಧಿಪಡಿಸಿದ ಸಂಖ್ಯೆ | ನೋಡಲ್ ಜಿಲ್ಲೆ |
|---|---|---|
| ಮಂಡ್ಯ + ರಾಮನಗರ | 26 ಜಿ.ಗು.ಮಾ<br>ಸಿವಿಲ್-22, ಕೃಷಿ/ರೇಷ್ಮೆ-2, ತೋಟಗಾರಿಕೆ-2, | ರಾಮನಗರ |

ಮುಂದುವರೆದು ಜಿಲ್ಲಾ ಗುಣನಿಯಂತ್ರಣ ಮಾನಿಟರ್ ಗಳ ಆಯ್ಕೆಗೆ ನಿವೃತ್ತ ಸಹಾಯಕ ಅಭಿಯಂತರರು, (ಬಿ.ಇ ಸಿವಿಲ್) ಹಾಗೂ ಮೇಲ್ಪಟ್ಟ ಹುದ್ದೆಯಲ್ಲಿರುವ ಅಭಿಯಂತರರು ಮತ್ತು ನಿವೃತ್ತ ತಾಲ್ಲೂಕು ಮಟ್ಟದ ಕೃಷಿ/ತೋಟಗಾರಿಕೆ/ಅರಣ್ಯ ಅಭಿಯಂತರರು ಹಾಗೂ ಆ ಹುದ್ದೆಗಿಂತ ಮೇಲ್ಪಟ್ಟ ಹುದ್ದೆಗಳನ್ನು ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ನಿರ್ದೇಶನದಂತೆ ಪರಿಗಣಿಸಬಹುದಾಗಿದೆ. ಆಯ್ಕೆಮಾಡಲು ಈ ಕೆಳಕಂಡಂತೆ ಆಯ್ಕೆ ಸಮಿತಿಯನ್ನು ರಚಿಸಲಾಗಿದೆ.

Sum mgnrega 2019-20 : 404

| ಕ್ರ.ಸಂ | ಪದನಾಮ | ಹುದ್ದೆ |
|---|---|---|
| 1 | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ರಾಮನಗರ ಜಿಲ್ಲಾ ಪಂಚಾಯತ್. | ಅಧ್ಯಕ್ಷರು |
| 2 | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಮಂಡ್ಯ ಜಿಲ್ಲಾ ಪಂಚಾಯತ್. | ಸಹ ಅಧ್ಯಕ್ಷರು |
| 3 | ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿಯರಿಂಗ್ ವಿಭಾಗ, ರಾಮನಗರ ಮತ್ತು ಮಂಡ್ಯ | ಸದಸ್ಯರು |
| 4 | ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ರಾಮನಗರ | ಸದಸ್ಯರು |
| 5 | ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ, ರಾಮನಗರ | ಸದಸ್ಯರು |
| 6 | ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಸಾಮಾಜಿಕ ಅರಣ್ಯ ಇಲಾಖೆ, ರಾಮನಗರ | ಸದಸ್ಯರು |
| 7 | ನಿರ್ದೇಶಕರು/ಮುಖ್ಯ ಕಾರ್ಯಾಚರಣೆ ಅಧಿಕಾರಿ/ಜಂಟಿ ನಿರ್ದೇಶಕರು(ತಾಂತ್ರಿಕ/ಆಡಳಿತ/ತೋಟಗಾರಿಕೆ), ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು | ಸದಸ್ಯರು |
| 8 | ಉಪ ಕಾರ್ಯದರ್ಶಿ, ರಾಮನಗರ ಜಿಲ್ಲಾ ಪಂಚಾಯತ್ | ಸದಸ್ಯ ಕಾರ್ಯದರ್ಶಿ |

ಪ್ರಕ್ರಿಯೆ ಪ್ರಾರಂಭದಲ್ಲಿ ಜಿಲ್ಲಾ ಗುಣನಿಯಂತ್ರಣ ಮಾನಿಟರ್ ಗಳ ಆಯ್ಕೆಗೆ ಪೂರಕವಾಗಿ ಈ ಕೆಳಕಂಡಂತೆ ಅರ್ಜಿ ನಮೂನೆಯನ್ನು ನೀಡಲಾಗಿದೆ.

ಅರ್ಜಿ ನಮೂನೆ (Online) ನಲ್ಲಿ ಭರ್ತಿಮಾಡತಕ್ಕದ್ದು ವೆಬ್ ಸೈಟ್ www.ramanagara.nic.in portal ನಲ್ಲಿ ಮೂಲ ಹಾಗೂ ಅರ್ಜಿ ನಮೂನೆಯಲ್ಲಿ ನಮೂದಿಸಿರುವ ಅಗತ್ಯ ದಾಖಲೆಗಳನ್ನು ನೇರಸಂದರ್ಶನದ ದಿವಸ ಹಾಜರುಪಡಿಸತಕ್ಕದ್ದು.

<u>ಮಹಾತ್ಮಗಾಂಧಿ ನರೇಗಾ ಯೋಜನೆ ಅಡಿಯಲ್ಲಿ ಗುಣ ನಿಯಂತ್ರಕರುಗಳ ಎಂಪ್ಯಾನೆಲ್ ಮೆಂಟ್ ಗಾಗಿ ಅರ್ಜಿ ನಮೂನೆ</u>

photo

1. ಅರ್ಜಿದಾರರ ಹೆಸರು :
2. ತಂದೆ/ಗಂಡನ ಹೆಸರು :
3. ಪ್ರಸ್ತುತ ವಿಳಾಸ :
4. ಖಾಯಂ ವಿಳಾಸ :
5. ಹುಟ್ಟಿದ ದಿನಾಂಕ ಮತ್ತು ವಯಸ್ಸು :
6. ವಿದ್ಯಾರ್ಹತೆ :
7. ಸೇವೆಗೆ ಸೇರಿದ ದಿನಾಂಕ ಮತ್ತು ಹೊಂದಿದ ಹುದ್ದೆ :
8. ಸೇವೆಯಿಂದ ನಿವೃತ್ತಿಯಾದಾಗ ಇದ್ದ ಹುದ್ದೆ :
9. ನಿವೃತ್ತಿಯಾದ ದಿನಾಂಕ: :
10. ದೂರವಾಣಿ ಸಂಖ್ಯೆ : :
    ಮೊಬೈಲ್ ಸಂಖ್ಯೆ :
    ಇ-ಮೇಲ್ :
11. ಗುರಿ ಮತ್ತು ದೃಷ್ಟಿಕೋನ (50 ಪದಗಳ ಮೀರದಂತೆ) (Goal and vision) :
12. ಸೇವಾ ಅನುಭವದ ವಿವರ :

| ಕ್ರ.ಸಂ | ಇಲಾಖೆ | ಹೊಂದಿದ ಹುದ್ದೆ | ಕರ್ತವ್ಯ ಮತ್ತು ಜವಾಬ್ದಾರಿ | ಅವಧಿ | ನಿರ್ವಹಿಸಿದ ಕರ್ತವ್ಯದ ಸೇವಾ ವಿವರ |
|---|---|---|---|---|---|
| 1 | 2 | 3 | 4 | 5. | 6 |

(ಹೆಚ್ಚುವರಿ ಮಾಹಿತಿ ಇದ್ದಲ್ಲಿ ಪ್ರತ್ಯೇಕ ಹಾಳೆಯನ್ನು ಒದಗಿಸುವುದು)

13. ನೀವು ವೈದ್ಯಕೀಯವಾಗಿ (ದೈಹಿಕವಾಗಿ ಮತ್ತು ಮಾನಸಿಕವಾಗಿ) ಕ್ಷೇತ್ರಗಳ ಭೇಟಿ ನಡೆಸಲು ಧೃಢಕಾಯರಾಗಿರುವಿರಾ? (ಧೃಢೀಕೃತ ವೈದ್ಯಕೀಯ ಪ್ರಮಾಣ ಪತ್ರ ಲಗತ್ತಿಸುವುದು)
14. ನಿವೃತ್ತಿ ಹೊಂದಿದ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಪಡೆದ ದೃಢೀಕೃತ ಪತ್ರ
15. ರಾಜಕೀಯ ಪಕ್ಷದ ಸದಸ್ಯರೇ? (ಪಬ್ಲಿಕ್ ನೋಟರಿಯಿಂದ ಧೃಢೀಕರಿಸಿದ ವೈಯಕ್ತಿಕ ಪ್ರಮಾಣ ಪತ್ರವನ್ನು ಲಗತ್ತಿಸುವುದು)
16. (ಅ) ಕ್ರಿಮಿನಲ್ ಪ್ರಕರಣದಲ್ಲಿ ಶಿಕ್ಷೆಗೊಳಗಾಗಿದ್ದೀರಾ/ಆರೋಪ ಪಟ್ಟಿ ದಾಖಲಾಗಿದೆಯೇ?
    (ಆ) ಇಲಾಖಾ ವಿಚಾರಣೆಯಲ್ಲಿ ದಂಡನೆಗೆ ಒಳಪಟ್ಟಿರುವಿರೇ/ಯಾವುದೇ ಇಲಾಖಾ ವಿಚಾರಣೆ ಬಾಕಿ ಇದೆಯೇ?

(ಪಬ್ಲಿಕ್ ನೋಟರಿಯಿಂದ ಧೃಢೀಕರಿಸಿದ ವೈಯಕ್ತಿಕ ಘೋಷಣಾ ಪ್ರಮಾಣ ಪತ್ರವನ್ನು ಸಲ್ಲಿಸುವುದು)

## ಘೋಷಣೆ

ನಾನು ____________ ಮೇಲ್ಕಂಡಂತೆ ನೀಡಿರುವ ಮಾಹಿತಿಯು ಸತ್ಯವಾಗಿರುತ್ತದೆ. ತಪ್ಪು ಮಾಹಿತಿ ನೀಡಿದ ಸಂದರ್ಭದಲ್ಲಿ ಕಾನೂನಿನ ಕ್ರಮಕ್ಕೆ ಒಳಗಾಗುವುದರ ಬಗ್ಗೆ ನನಗೆ ಮನವರಿಕೆಯಾಗಿದೆಯುಂದು ಘೋಷಿಸುತ್ತೇನೆ.

ನಾನು__________________ ಈ ಮೂಲಕ ದೃಢೀಕರಿಸುವುದೇನೆಂದರೆ, ನನ್ನ ವಿರಧ್ಧ ಯಾವುದೇ ಇಲಾಖಾ ವಿಚಾರಣೆ/ಶಿಸ್ತಿನ ಪ್ರಕರಣಗಳು ಇರುವುದಿಲ್ಲವೆಂದು ಮತ್ತು ನನ್ನಿಂದ ಯಾವುದೇ ಬಾಕಿ ಹಣ (ಡಿಸಿಬಿ) ಇರುವುದಿಲ್ಲವೆಂದು ದೃಢೀಕರಿಸುತ್ತೇನೆ.

ನಾನು ________________ ಭೌತಿಕವಾಗಿ ದೈಹಿಕ ಧೃಡತೆ ಹೊಂದಿರುವುದಲ್ಲದೇ, ಕ್ಷೇತ್ರ ಮಟ್ಟದ ಭೇಟಿಗೆ ಪ್ರವಾಸ ಕೈಗೊಳ್ಳಲು ಸಮರ್ಥನಾಗಿರುತ್ತೇನೆಂದು ದೃಢೀಕರಿಸುತ್ತೇನೆ.

ಸ್ಥಳ:
ದಿನಾಂಕ:

ಅಭ್ಯರ್ಥಿಯ ಸಹಿ

ಸದರಿ ಪ್ರಕ್ರಿಯೆಯನ್ನು ನಿಗಧಿತ ಸಮಯದಲ್ಲಿ ಪೂರ್ಣಗೊಳಸಬೇಕಾಗಿರುವುದರಿಂದ ಪೂರ್ಣ ಪ್ರಕ್ರಿಯೆಯನ್ನು ಈ ಕೆಳಕಂಡಂತೆ ಕ್ರಮವಹಿಸಲು ವೇಳಾಪಟ್ಟಿ ಪ್ರಕಟಿಸಲಾಗಿದೆ.

1. ಪತ್ರಿಕೆಯಲ್ಲಿ ಪ್ರಕಟಣಾ ದಿನಾಂಕ: 04.06.2020 ರಂದು ರಾಮನಗರ ಜಿಲ್ಲಾ ಪಂಚಾಯತ್ ಕಛೇರಿಯಿಂದ ಹೊರಡಿಸಲಾಗುವುದು
2. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 22.06.2020. (ನೋಡಲ್ ಜಿ.ಪಂ. ಮು.ಕಾ.ನಿ ರವರ ಕಛೇರಿಯಲ್ಲಿ)
3. ಅರ್ಜಿ ಪರಿಶೀಲನೆ ದಿನಾಂಕ: 24.06.2020 (ನೋಡಲ್ ಜಿ.ಪಂ ಮು.ಕಾ.ನಿ ರವರ ಕಛೇರಿಯಲ್ಲಿ)
4. ನೇರ ಸಂದರ್ಶನ ದಿನಾಂಕ: 30.06.2020 (ನೋಡಲ್ ಜಿ.ಪಂ. ಮು.ಕಾ.ನಿ ರವರ ಕಛೇರಿಯಲ್ಲಿ)
5. ಅಂತಿಮ ಪಟ್ಟಿಯನ್ನು ಗ್ರಾಮೀಣಾಭಿವೃದ್ಧಿ ಆಯುಕ್ತಾಲಯಕ್ಕೆ ಸಲ್ಲಿಸುವ ದಿನಾಂಕ: 30.06.2020.

ಮುಂದುವರೆದು ದಿನಾಂಕ: 30.06.2020. ರಂದು ಈ ಕೆಳಕಂಡ ಸ್ಥಳಗಳಲ್ಲಿ ಸಂದರ್ಶನ ನಡೆಸಲು ನಿರ್ದೇಶಿಸಲಾಗಿದೆ.

| ಕ್ರ. ಸಂ | ನೇರ ಸಂದರ್ಶನದ ದಿನಾಂಕ ಮತ್ತು ವೇಳೆ | ಜಿಲ್ಲೆಯ ಹೆಸರು | ನೇರ ಸಂದರ್ಶನ ಸ್ಥಳ |
|---|---|---|---|
| 1 | ದಿನಾಂಕ: 30.06.2020. | ಮಂಡ್ಯ + ರಾಮನಗರ | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್. ರಾಮನಗರ |

ಷರತ್ತುಗಳು:-

1. ಜಿಲ್ಲಾ ಗುಣ ನಿಯಂತ್ರಕರು ಸಾರ್ವಜನಿಕ ಸೇವೆಯ ಧ್ಯೇಯವನ್ನು ಹೊಂದಿರಬೇಕು ಹಾಗೂ ಪ್ರಮಾಣಿಕವಾಗಿ ಕೆಲಸ ನಿರ್ವಹಿಸಲು ಆಸಕ್ತಿ ಹೊಂದಿರಬೇಕು.
2. ಸದರಿ ಜಿಲ್ಲಾ ಗುಣ ನಿಯಂತ್ರಕರನ್ನು ತಾಂತ್ರಿಕರನ್ನು ತಾಂತ್ರಿಕ ಸಮಿತಿ ಮೂಲಕ ಅವರ ವಿಷಯದ ಜ್ಞಾನ, ಅನುಭವ ಮತ್ತು ಪ್ರಾಮಾಣಿಕತೆ ಆಧಾರಿಸಿ ಆಯ್ಕೆ ಮಾಡಲಾಗುವುದು
3. ನೇಮಕಾತಿಯಾದ ಜಿಲ್ಲಾ ಗುಣ ನಿಯಂತ್ರಕರು ಮಾಹೆಯಲ್ಲಿ ಸರಿ ಸುಮಾರಾಗಿ 8-10 ದಿನಗಳ ಕ್ಷೇತ್ರ ಭೇಟಿ ನೀಡಿ ಪರಿವೀಕ್ಷಣೆ, ತನಿಖೆಗಳನ್ನು ಈ ಯೋಜನೆಯ ಕಾರ್ಯಸೂಚಿ ಪ್ರಕಾರ ನಿರ್ವಹಿಸಿ, ನಿಗಧಿತ ನಮೂನೆಯಲ್ಲಿ ವರದಿಯನ್ನು ಸಲ್ಲಿಸತಕ್ಕದ್ದು, ಈ ವರದಿಯನ್ನು 3 ಪ್ರತಿಗಳಲ್ಲಿ ತಯಾರಿಸಿ ಮೊದಲ ಪ್ರತಿಯನ್ನು ಸಂಬಂಧಪಟ್ಟ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮತ್ತು 2 ಮುದ್ರಿತ ಪ್ರತಿಗಳನ್ನು ಸಾಫ್ಟ್ ಪ್ರತಿಯೊಂದಿಗೆ ಆಯುಕ್ತಾಲಯಕ್ಕೆ ಸಲ್ಲಿಸತಕ್ಕದ್ದು. ಇದರಲ್ಲಿ ಅವರು ಅಗತ್ಯ ದಾಖಲೆಗಳನ್ನು ಲಗತ್ತಿಸತಕ್ಕದ್ದು ಹಾಗೂ ತಮ್ಮ ತಾಂತ್ರಿಕ ಅಭಿಪ್ರಾಯವನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು, ಪರೀವೀಕ್ಷಣೆ/ತನಿಖೆ ನಡೆಸಿದ ಬಗ್ಗೆ ಛಾಯಾ ಚಿತ್ರಗಳು ಹಾಗೂ ಮಹಜರ್ ಇತ್ಯಾದಿಗಳನ್ನು ಲಗತ್ತಿಸತಕ್ಕದ್ದು. ಸಾಮಾನ್ಯವಾಗಿ ಜಿಲ್ಲಾ ಗುಣನಿಯಂತ್ರಕರು ಪರೀವೀಕ್ಷಣೆ/ತನಿಖೆಯ ಸಂದರ್ಭದಲ್ಲಿ ವಿನ್ಯಾಸ, ತಾಂತ್ರಿಕ ವಿಷಯ, ಅಂದಾಜು ಪತ್ರಿಕೆ ಹಾಗೂ ಬಿಲ್ಲುಗಳ ತಯಾರಿಕೆ ಬಗ್ಗೆ ತಮ್ಮ ಅನುಭವವನ್ನು ಹಂಚಿಕೊಳ್ಳುವುದರಲ್ಲಿ ಮಾರ್ಗದರ್ಶನ ನೀಡುವುದು.
4. ಆಯ್ಕೆಯಾಗುವ ಜಿಲ್ಲಾ ಗುಣ ನಿಯಂತ್ರಕರು ಪ್ರತಿ ದಿನಕ್ಕೆ ರೂ. 2500/-ಗಳ ಪರಿವೀಕ್ಷಣೆ ಭತ್ಯೆ, ರೂ.100/-ಗಳ ವರದಿ ಭತ್ಯೆಯನ್ನು ಹಾಗೂ ಗರಿಷ್ಠ ಮಾಹೆ ರೂ. 3000/- ಮೀರದಂತೆ ಪ್ರಯಾಣ ಭತ್ಯೆಗೆ ಅರ್ಹರಾಗಿರುತ್ತಾರೆ.
5. ಜಿಲ್ಲಾ ಗುಣ ನಿಯಂತ್ರಕರುಗಳ ಆಯ್ಕೆ ಕನಿಷ್ಟ ವಯೋಮಿತಿ 60 ವರ್ಷದಿಂದ ಗರಿಷ್ಟ ವಯೋಮಿತಿ 65 ವರ್ಷಗಳಾಗಿದ್ದು, ಸಂದರ್ಶನದ ವೇಳೆ ಸೂಕ್ತ ಪೂರವೆಯನ್ನು ಒದಗಿಸತಕ್ಕದ್ದು, ಸದ್ಯಕ್ಕೆ ಈ ನೇಮಕಾತಿಯು ಒಂದು ವರ್ಷಕ್ಕೆ ಸೀಮಿತವಾಗಿದ್ದು, ಸಂಬಂಧಿಸಿದ ಜಿಲ್ಲಾ ಗುಣ ನಿಯಂತ್ರಕರುಗಳನ್ನು ಕಾರ್ಯ ಕ್ಷಮತೆ ಆಧರಿಸಿ 1 ವರ್ಷ ನಂತರದ 1 ವರ್ಷಕ್ಕೆ ಸೇವೆ ವಿಸ್ತರಿಸಲಾಗುವುದು.
6. ಆಯ್ಕೆಯಾಗಿರುವ ಜಿಲ್ಲಾ ಗುಣ ನಿಯಂತ್ರಕರುಗಳ ಮೇಲೆ ಯಾವುದೇ ಇಲಾಖಾ ವಿಚಾರಣೆ/ಶಿಸ್ತು ಪ್ರಕರಣಗಳು ಇರತಕ್ಕದ್ದಲ್ಲ.

   ಅ) ಕ್ರಿಮಿನಲ್ ಪ್ರಕರಣದಲ್ಲಿ ಶಿಕ್ಷೆಗೊಳಗಾಗಿದ್ದೀರಾ/ಆರೋಪ ಪಟ್ಟಿ ದಾಖಲಾಗಿದೆಯೇ?

   ಆ) ಇಲಾಖಾ ವಿಚಾರಣೆಯಲ್ಲಿ ದಂಡನೆಗೆ ಒಳಪಟ್ಟಿರುವಿರೇ/ಯಾವುದೇ ಇಲಾಖಾ ವಿಚಾರಣೆ ಬಾಕಿ ಇದೆಯೇ?

   (ಪಬ್ಲಿಕ್ ನೋಟರಿಯಿಂದ ಧೃಢೀಕರಿಸಿದ ವೈಯಕ್ತಿಕ ಘೋಷಣಾ ಪ್ರಮಾಣ ಪತ್ರವನ್ನು ಸಲ್ಲಿಸುವುದು)

7. ಅರ್ಹ ಅಭ್ಯರ್ಥಿಗಳು ಹಾಲಿ ತಾವು ವಾಸವಿರುವ ಜಿಲ್ಲೆಯನ್ನು ಹೊರತುಪಡಿಸಿ ತಮಗೆ ಆಸಕ್ತಿಇರುವ ರಾಮನಗರ ಅಥವಾ ಮಂಡ್ಯ ಜಿಲ್ಲೆಗೆ ಆಧ್ಯತೆಯ ಮೇಲೆ ನಮೂದಿಸುವುದು.
8. ಜಿಲ್ಲಾ ಗುಣ ನಿಯಂತ್ರಕರು ಸಾಮಾನ್ಯವಾಗಿ ತಮಗೆ ಹಂಚಿಕೆಯಾದ ಜಿಲ್ಲೆಯ ಜಿಲ್ಲಾ ಕೇಂದ್ರ ಸ್ಥಾನದಲ್ಲಿ ವಾಸವಾಗಿರುತ್ತಾರೆಂದು ಪರಿಗಣಿಸಿ ಅವರ ಪ್ರಯಾಣ ಭತ್ಯೆಯನ್ನು ಲೆಕ್ಕಾಚಾರ ಮಾಡಲಾಗುವುದು.
9. ಜಿಲ್ಲಾ ಗುಣನಿಯಂತ್ರಕರು, ಗ್ರಾಮೀಣ ರಸ್ತೆ ನಿರ್ಮಾಣ ಮತ್ತು ಅದಕ್ಕೆ ಸಂಬಂಧಿಸಿದ ವಿನ್ಯಾಸ ಕಾಮಗಾರಿ, ಸಣ್ಣ ಕೆರೆಗಳ ನಿರ್ಮಾಣ, ಕಟ್ಟಡಗಳ ನಿರ್ಮಾಣ, ಬಿಲ್ಲುಗಳ ತಯಾರಿಕೆ, ಸಿವಿಲ್ ಇಂಜಿನಿಯರಿಂಗ್‌ಗಳ ಕೆಲಸ ನಿರ್ವಹಣೆ, ಕಾಮಗಾರಿಯ ಗುಣಮಟ್ಟ ಹಾಗೂ ಕಟ್ಟಡ ನಿರ್ಮಾಣ ಸಾಮಾಗ್ರಿಗಳ, ಬಳಕೆಯಾದ ಪ್ರಮಾಣವನ್ನು ದೃಢೀಕರಿಸುವುದು, ಇತ್ಯಾದಿ ವಿಷಯಗಳಲ್ಲಿ ಅನುಭವ ಹೊಂದರತಕ್ಕದ್ದು.
10. ಸಿವಿಲ್ ಇಂಜಿನಿಯರಿಂಗ್ ಜಿಲ್ಲಾ ಗುಣ ನಿಯಂತ್ರಕರ ಆಯ್ಕೆಗೆ ಕನಿಷ್ಠ 15 ವರ್ಷ ಸರ್ಕಾರಿ ಇಲಾಖೆಯಲ್ಲಿ ಸೇವೆ ಸಲ್ಲಿಸಿ, ನಿವೃತ್ತಿ ಹೊಂದಿದ ಸಮಯದಲ್ಲಿ ಕನಿಷ್ಠ ಸಹಾಯಕ ಅಭಿಯಂತರರಾಗಿ ಅಥವಾ ಅದಕ್ಕಿಂತ ಮೇಲಿನ ಹುದ್ದೆಯಲ್ಲಿ ಕಾರ್ಯನಿರ್ವಹಿಸಿದ ಅಭ್ಯರ್ಥಿಗಳು ಅರ್ಹರಾಗಿರುತ್ತಾರೆ.
11. ಅರಣ್ಯ/ಕೃಷಿ/ ತೋಟಗಾರಿಕೆ ಜಿಲ್ಲಾ ಗುಣ ನಿಯಂತ್ರಕರುಗಳ ಆಯ್ಕೆಗೆ ಕನಿಷ್ಠ 15 ವರ್ಷ ಸರ್ಕಾರಿ ಇಲಾಖೆ ಅಥವಾ ಸರ್ಕಾರಿ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸಿ ನಿವೃತ್ತರಾದ ಕೃಷಿ ಜಂಟಿ ನಿರ್ದೇಶಕರು ಅಥವಾ ಮೇಲ್ಪಟ್ಟ ತೋಟಗಾರಿಕೆ ಉಪ ನಿರ್ದೇಶಕರು ಅಥವಾ ಮೇಲ್ಪಟ್ಟ ಹುದ್ದೆಯ ಅಧಿಕಾರಿಗಳು ಅರ್ಹರಾಗಿರುತ್ತಾರೆ.
12. ಜಿಲ್ಲಾ ಗುಣ ನಿಯಂತ್ರಕರು ಆಯ್ಕೆ ಸಂಬಂಧ ಅರ್ಜಿಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಸಂಪೂರ್ಣ ಹಕ್ಕು ರಾಮನಗರ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಇವರಲ್ಲಿ ಕಾಯ್ದಿರಸಲಾಗಿದೆ.
13. ನಿಗಧಿತ ನಮೂನೆಯಲ್ಲಿ ಭರ್ತಿ ಮಾಡಿದ ಎಲ್ಲಾ ದಾಖಲೆಯೊಂದಿಗೆ ನೇರ ಸಂದರ್ಶನ ಸಂದರ್ಭದಲ್ಲಿ ತಪ್ಪದೇ ಸಲ್ಲಿಸತಕ್ಕದ್ದು.
14. ಆಯ್ಕೆಯಾದ ಗುಣ ನಿಯಂತಕರುಗಳು ಇಲಾಖೆಯೊಂದಿಗೆ ಸೇವಾ ಒಪ್ಪಂದ (Service level agreement) ಮಾಡಿಕೊಳ್ಳತಕ್ಕದ್ದು.
15. ಆಯ್ಕೆಯಾದ ಗುಣ ನಿಯಂತಕರುಗಳು ಸೇವೆಯಿಂದ ಮುಕ್ತತೆ (Empanelment) ಹೊಂದಲು ಇಚ್ಚಿಸಿದ್ದಲ್ಲಿ ಇಲಾಖೆಗೆ ಒಂದು ತಿಂಗಳ ಮುಂಚೆ ನೋಟೀಸ್ ನೀಡತಕ್ಕದ್ದು.
16. ಆಯ್ಕೆಯಾದ ಗುಣ ನಿಯಂತ್ರಕರುಗಳು ಎಂಫ್ಯಾನೆಲ್ ಸೇವೆಯಲ್ಲಿ ಅವರ ಸೇವೆಯು ಇಲಾಖೆಗೆ ತೃಪ್ತಿಕರವಾಗಿ ಕಂಡುಬಂದಲ್ಲಿ ಮಾತ್ರ ಸೇವೆಯಲ್ಲಿ ಮುಂದುವರಿಸಲಾಗುವುದು
17. ಜಿಲ್ಲಾ ಗುಣನಿಯಂತ್ರಕರುಗಳನ್ನು ಯಾವುದೇ ಸಂದರ್ಭದಲ್ಲಿ ಎಂಪ್ಯಾನೆಲ್ ಸೇವೆಯಿಂದ ತೆಗೆದು ಹಾಕಬಹುದಾಗಿದೆ ಮತ್ತು ಸದರಿ ಸೇವೆಯಿಂದ ತೆಗೆದುಹಾಕುವ ಬಗ್ಗೆ ಇಲಾಖೆಯು ಯಾವುದೇ ಕಾರಣಗಳನ್ನು ನೀಡಲಾಗುವುದಿಲ್ಲ.
18. ಈಗಾಗಲೇ ಕರ್ತವ್ಯ ನಿರ್ವಹಿಸುತ್ತಿರುವ ರಾಜ್ಯ/ಜಿಲ್ಲಾ ಗುಣನಿಯಂತ್ರಕರು ಇವರ ಸೇವೆಯನ್ನು 11.02.2020 ರಿಂದಲೇ ರದ್ದು ಪಡಿಸಲಾಗಿದೆ. ಈಗಾಗಲೇ ಕರ್ತವ್ಯ ನಿರ್ವಹಿಸುತ್ತಿರುವವರು ರದ್ದುಪಡಿಸಿದ ನಂತರ ಮರು ಆಯ್ಕೆ ಇಚ್ಚಿಸಿದ್ದಲ್ಲಿ ಹೊಸದಾಗಿ ಅರ್ಜಿ ಸಲ್ಲಿಸಲು ಷರತ್ತುಗಳನ್ವಯ ಅವಕಾಶವಿರುತ್ತದೆ.
19. ಜಿಲ್ಲಾವಾರು ನಿಗಧಿಪಡಿಸಿರುವ ಜಿಲ್ಲಾ ಗುಣ ಮಟ್ಟ ನಿಯಂತ್ರಣ ಮಾನಿಟರ್‌ಗಳ ಆಯ್ಕೆಯು ಸಿವಿಲ್ ಇಂಜಿನಿಯರಿಂಗ್ ವಿಭಾಗ ಹೊರತುಪಡಿಸಿ ಪ್ರತಿ 2 ಜಿಲ್ಲೆಗೆ ಇಬ್ಬರು ಕೃಷಿ ವಿಭಾಗದಿಂದ ಹಾಗೂ ಇಬ್ಬರು ತೋಟಗಾರಿಕೆಯಿಂದ ಆಯ್ಕೆ ಮಾಡಿಕೊಳ್ಳಲು ತಿಳಿಸಿದೆ. (ನಿಗಧಿಪಡಿಸಿದ 2 ಜಿಲ್ಲೆಗಳಿಗೆ ಗುರಿ ಮೀರದಂತೆ)
20. ಇಲಾಖಾ ವೆಬ್ ಸೈಟ್ www.ramanagara.nic.in portal
21. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಉಪ ಕಾರ್ಯದರ್ಶಿ, ರಾಮನಗರ ಜಿಲ್ಲಾ ಪಂಚಾಯಿತಿ ದೂರವಾಣಿ ಸಂ: 9480875001 ಇವರನ್ನು ಸಂಪರ್ಕಿಸಬಹುದಾಗಿದೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ರಾಮನಗರ ಜಿಲ್ಲಾ ಪಂಚಾಯತ್.

ಪ್ರತಿಯನ್ನು:-

1. ಮಾನ್ಯ ಆಯುಕ್ತರು, ಗ್ರಾಮೀಣಾಭಿವೃದ್ಧಿ ಗಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬೆಂಗಳೂರು ರವರಿಗೆ ಮಾಹಿತಿಗಾಗಿ,
2. ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ರಾಮನಗರ ರವರಿಗೆ, ಕಳುಹಿಸುತ್ತಾ, ಉಚಿತವಾಗಿ ರಾಜ್ಯ ಮಟ್ಟದ ಪತ್ರಿಕೆಗಳಲ್ಲಿ ಸ್ಥಳೀಯ ಪತ್ರಿಕೆಯಲ್ಲಿ ಪ್ರಕಟಿಸಲು ಕೋರಿದೆ.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಮಂಡ್ಯ ಜಿಲ್ಲಾ ಪಂಚಾಯತ್ ರವರಿಗೆ ಮಾಹಿತಿಗಾಗಿ,
4. ಜಿಲ್ಲಾ ಮಾಹಿತಿ ಅಧಿಕಾರಿ, ಎನ್. ಐ.ಸಿ. ರವರಿಗೆ ಕಳುಹಿಸುತ್ತಾ, ಜಿಲ್ಲಾ ಪಂಚಾಯಿತಿಯ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಿದೆ.

Sum mgnrega 2019-20 : 408